ಆ) ಸದರಿ ನೀರಾವರಿಯಲ್ಲಿ ಯಾವ ಯಾವ ಬೆಳೆಗಳಿಗೆ ಎಷ್ಟು ಎಕರೆ ಜಮೀನನ್ನು ಒಳಪಡಿಸಲಾಗಿದೆ ?

ಇ) ಸದರಿ ನೀರಾವರಿ ಪದ್ಧತಿಯು ಅಸಮರ್ಪಕವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಅಸಮರ್ಪಕ ನೀರಾವರಿ ಕ್ರಮವನ್ನು ಸುಧಾರಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೨,೪೩,೯೧೨ ಹೆಕ್ಟೇರುಗಳು. (೬.೦೨,೬೯೮ ಎಕರೆಗಳು)

ಆ)

ಭತ್ತ	೨೧,೦೯೯ ಹೆಕ್ಟೇರುಗಳು (೫೨,೧೩೪ ಎಕರೆಗಳು)
ಕಬ್ಬು	೮,೪೩೬ ಹೆಕ್ಟೇರುಗಳು (೨೦,೮೪೪ ಎಕರೆಗಳು)
ಬಾಗಾಯ್ತು	೬,೩೪೫ ಹೆಕ್ಟೇರುಗಳು (೧೫,೬೭೮ ಎಕರೆಗಳು)
ಮುಂಗಾರು ಖುಷ್ಕಿ	೮೯,೩೦೪ ಹೆಕ್ಟೇರುಗಳು (೨೦,೬೬೬ ಎಕರೆಗಳು)
ಹಿಂಗಾರು ಖುಷ್ಕಿ	೮೮,೭೬೧ ಹೆಕ್ಟೇರುಗಳು(೨,೧೯,೩೨೭ ಎಕರೆಗಳು)
ಹತ್ತಿ	೨೯,೯೭೬ ಹೆಕ್ಟೇರುಗಳು(೭೪,೦೪೯ ಎಕರೆಗಳು)
	೨೪೩,೯೧೨ ಹೆಕ್ಟೇರುಗಳು (೬,೦೨,೬೯೮ ಎಕರೆಗಳು)

ಇ) ಬಂದಿದೆ.

ಈ) ಅನಧಿಕೃತ ಬೆಳೆಗಳನ್ನು ತಪ್ಪಿಸುವುದು. ಅನಧಿಕೃತ ಕ್ಷೇತ್ರದಲ್ಲಿ ಬೆಳೆಯಲಾಗುತ್ತಿರುವ ಭತ್ತದ ಬೆಳೆಯನ್ನು ತಪ್ಪಿಸುವುದು. ನಾಲೆಯನ್ನು ಧೀರ್ಘಾವಧಿ ಮುಚ್ಚಿ, ನಾಲೆಯ ಒಳಮುಖಗಳನ್ನು ಬಲಪಡಿಸುವುದು ಮತ್ತು ಸದರಿ ಕೆಲಸಕ್ಕೆ ಬೇಕಾದ ಹೆಚ್ಚಿನ ಹಣದ ಸೌಲಭ್ಯತೆಯನ್ನೊದಗಿಸುವುದು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ತುಂಗಭದ್ರಾ ಜಲಾಶಯದಲ್ಲಿ ದೂಳು ತುಂಬುತ್ತಿರುವ ಬಗ್ಗೆ

೪೭೫ (೧೧೮೯) ಶ್ರೀ ಕೆ.ಹೆಚ್. ಕಾರಡಗಿ (ಹರಪನಹಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತುಂಗಭದ್ರಾ ಜಲಾಶಯದಲ್ಲಿ ದೂಳು ತುಂಬುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇದನ್ನು ತೆಗೆಯಲು ಸರ್ಕಾರದವರು ಕೈಕೊಂಡಿರುವ ಕ್ರಮಗಳೇನು ?

ಆ) ತುಂಗಭದ್ರಾ ನದಿಯಿಂದ ಮುಂಡರಗಿ ತಾಲ್ಲೂಕಿನ ಜಮೀನುಗಳಿಗೆ ಯಾತ ನೀರಾವರಿ ಸೌಕರ್ಯವಿದ್ದು ಬೇಸಿಗೆಯಲ್ಲಿ ನೀರು ದೊರಕದೆ ಇರುವುದು ನಿಜವಲ್ಲವೆ ?

ಇ) ತುಂಗಭದ್ರಾ ನದಿಯ, ನೀರನ್ನು ಸರಿಯಾಗಿ ಬಳಸಿಕೊಳ್ಳುವುದಕ್ಕಾಗಿ ಮತ್ತು ದೂಳು ತಡೆಗಟ್ಟಲು ಪರದಾ ನದಿಗೆ ಕಟ್ಟಲ್ಪಟ್ಟಿರುವ ಅಡ್ಡಗೋಡೆಗಳ ವಾವರಿಯಲ್ಲಿಯೇ ಕಟ್ಟುವ ಯೋಜನೆ ಸರ್ಕಾರದವರಲ್ಲಿದೆಯೇ ? ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಜಲಾಶಯಗಳಲ್ಲಿ ದೂಳು ತುಂಬುವುದು ಒಂದು ನೈಸರ್ಗಿಕ ಸಂಗತಿ ಚಿಕ್ಕನಗರಿ ನದಿಗೆ ಅಡ್ಡಲಾಗಿ ಹಗರಿಬೊಮ್ಮನಹಳ್ಳಿಯ ಸಮೀಪ ಒಂದು ಆಣೆಕಟ್ಟನ್ನು ಈಗಾಗಲೇ ಕಟ್ಟಿರುವುದು ತುಂಗಭದ್ರಾ ನದಿಯ ಉಪನದಿಯಾದ ಹಿರೇದಳ್ಳ ನದಿಗೆ ಒಂದು ಆಣೆಕಟ್ಟನ್ನು ಕಟ್ಟಲಾಗುತ್ತಿರುವುದು ಮತ್ತು ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ವನ ನಿರ್ಮಾಣ ಯೋಜನೆಗಳು.

ಆ) ನಿಜವಲ್ಲ.

ಇ) ಇಂತಹ ಪ್ರಸ್ತಾವಗಳಾವುವು ಇಲ್ಲ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ತುಮಕೂರು ತಾಲ್ಲೂಕಿನಲ್ಲಿ ಹೊಸಕೆರೆ ನಿರ್ಮಾಣ

೪೭೩ (೧೨೧೦) ಶ್ರೀ ಟಿ. ಹೆಚ್. ಹನುಮಂತರಾಯಪ್ಪ(ಬೆಳ್ಳಾವಿ).— ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಆ) ತುಮಕೂರು ತಾಲ್ಲೂಕಿನ ಜಕ್ಕೇನಹಳ್ಳಿ ಕೆರೆ ನಿರ್ಮಾಣ ಕಾಮಗಾರಿಯನ್ನು ಮಂಜೂರು ಮಾಡಿದ ದಿನಾಂಕವಾವುದು ? ಹಾಗೂ ಅದಕ್ಕಾಗಿ ಮಂಜೂರಾಗಿರುವ ಹಣ ಎಷ್ಟು ?

ಆ) ಸದರಿ ಕೆರೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ ? ಹಾಗಿದ್ದಲ್ಲಿ. ಯಾವಾಗ ಪ್ರಾರಂಭಿಸಲಾಯಿತು ?

ಇ) ಸದರಿ ಕೆರೆಯ ಕಾಮಗಾರಿಯನ್ನು ಪ್ರಾರಂಭಿಸದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಆ) ಸದರಿ ಕೆರೆಯ ಅಂದಾಜು ಪಟ್ಟಿಯು ಇನ್ನೂ ಮಂಜೂರಾಗಿರುವುದಿಲ್ಲ. ೧೯೮೩–೮೪ರಲ್ಲಿ ಮಂಜೂರಾಗಿರುವ ಹಣ ೫೦,೦೦೦ ರೂಪಾಯಿಗಳು.

ಆ) ಇಲ್ಲ.

ಇ) ಇನ್ನೂ ಅಂದಾಜು ಪಟ್ಟಿ ಮಂಜೂರಾತಿಯಾಗಿಲ್ಲವಾದ್ದರಿಂದ ಈ ಕೆರೆಯ ಕಾಮಗಾರಿಯನ್ನು ಪ್ರಾರಂಭಿಸಿಲ್ಲ.

೪೭೦ (೧೩೧೨) ಸದಸ್ಯರು ಗೈರು ಹಾಜರಿ.

೪೭೨ (೧೦೪೭) ಸದಸ್ಯರು ಗೈರು ಹಾಜರಿ.

ಶ್ರೀ ಟಿ.ಹೆಚ್. ಹನುಮಂತರಾಯಪ್ಪ.—ಸ್ವಾಮಿ, ಜಕ್ಕೇನಹಳ್ಳಿ ಕೆರೆ ನಿರ್ಮಾಣದ ಸಲುವಾಗಿ ೧೯೭೭ನೇ ಇಸವಿಯಲ್ಲಿ ಅಡಿಪಾಯ ಹಾಕಿದ್ದು ಅದರ ವೆಚ್ಚ ಆಗ ೨ ಲಕ್ಷ ರೂಪಾಯಿಗಳು ಮಾತ್ರ ಇತ್ತು. ಈಗ ಅದು ೪ ಲಕ್ಷ ರೂಪಾಯಿಗಳು ಆಗುತ್ತದೆ. ಆದಷ್ಟು ಜಾಗ್ರತೆ ಈ ಕೆರೆಯ ನಿರ್ಮಾಣ ಕೆಲಸವನ್ನು ಕೈಗೆತ್ತಿಕೊಳ್ಳುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸ್ವಾಮಿ, ೮೩–೮೪ರ ಆಯವ್ಯಯದಲ್ಲಿ ೫೦,೦೦೦ರೂಪಾಯಿಗಳನ್ನು ಇದಕ್ಕೆ ಇಟ್ಟಿದ್ದೇವೆ. ಕೆರೆ ನಿರ್ಮಾಣಕ್ಕೆ ತಾಂತ್ರಿಕವಾಗಿ ತೊಂದರೆಯಾಗುತ್ತದೆಂದು ಸ್ಥಳ ಬದಲಾವಣೆಮಾಡುವ ಇಚ್ಛೆಯನ್ನು ಇಂಜಿನಿಯರುಗಳು ತಿಳಿಸಿದ್ದರಿಂದ ಈಗ ಸ್ಥಳವನ್ನು ಬದಲಾಯಿಸಿ ಜಾಗ್ರತೆ ಕೆಲಸ ತೆಗೆದುಕೊಳ್ಳುವಂತೆ ನಿರ್ದೇಶನ ಕೊಡುತ್ತೇನೆ.

೪೭೫ (೧೧೮೪) ಸದಸ್ಯರು ಗೈರು ಹಾಜರಿ